ಆ) 200. ಉತ್ತರ ಕನ್ನಡ ಜಿಲ್ಲೆಯಲ್ಲಿ 15 ಹುದ್ದೆಗಳು ಖಾಲಿ ಇದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.)

ಅನುಬಂಧ

ಉತ್ತರಕನ್ನಡ ಜಿಲ್ಲೆಯಲ್ಲಿನ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳ ಸ್ಥಳಗಳ ವಿವರಗಳು.

1. ಸಂಚಾರಿ ಪಶು ಚಿಕಿತ್ಸಾಲಯ, ಹೊನ್ನಾವರ
2. ಸಂಚಾರಿ ಪಶು ಚಿಕಿತ್ಸಾಲಯ, ಹಳಿಯಾಳ
3. ಪಶು ಚಿಕಿತ್ಸಾಲಯ, ಮುರ್ಕವಾಡ, ಹಳಿಯಾಳ ತಾಲ್ಲೂಕು.
4. ಪಶು ಚಿಕಿತ್ಸಾಲಯ, ಕೆಕ್ಕಾರ, ಹೊನ್ನಾವರ ತಾಲ್ಲೂಕು.
5. ಪಶು ಚಿಕಿತ್ಸಾಲಯ, ಹರವಾಡ, ಅಂಕೋಲ ತಾಲ್ಲೂಕು.
6. ಪಶು ಚಿಕಿತ್ಸಾಲಯ, ಗಡಸಾಯಿ, ಕಾರವಾರ ತಾಲ್ಲೂಕು
7. ಪಶು ಆಸ್ಪತ್ರೆ, ಕಾರವಾರ (ವಿಸ್ತರಣಾಧಿಕಾರಿ ಹುದ್ದೆ)
8. ಪಶು ಆಸ್ಪತ್ರೆ, ಜೊಯಿಡಾ (ವಿಸ್ತರಣಾಧಿಕಾರಿ ಹುದ್ದೆ)
9. ಪಶು ಆಸ್ಪತ್ರೆ, ಅಂಕೋಲ (ವಿಸ್ತರಣಾಧಿಕಾರಿ ಹುದ್ದೆ)
10. ಪಶು ಆಸ್ಪತ್ರೆ, ಕುಮಟ (ವಿಸ್ತರಣಾಧಿಕಾರಿ)
11. ಪಶು ಚಿಕಿತ್ಸಾಲಯ, ಕವಲವಾಡ, ಹಳಿಯಾಲ ತಾಲ್ಲೂಕು
12. ಸಂಚಾರಿ ಪಶು ಚಿಕಿತ್ಸಾಲಯ, ಯಲ್ಲಾಪುರ
13. ಪಶು ಚಿಕಿತ್ಸಾಲಯ, ಚಂದರಘಟಗಿ, ಸಿದ್ದಾಪುರ ತಾಲ್ಲೂಕು
14. ಸಂಚಾರಿ ಪಶು ಚಿಕಿತ್ಸಾಲಯ, ಕಾರವಾರ
15. ಸಂಚಾರಿ ಪಶು ಚಿಕಿತ್ಸಾಲಯ, ಸಿರ್ಸಿ.

ವಿಷಯ:- ಉ.ಕ.ಜಿಲ್ಲೆಯಲ್ಲಿ ಸೀಗಡಿ ಮೀನುಗಳಿಗೆ ರೋಗ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 632 (1280)

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ):- ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸೀಗಡಿ ಮೀನುಗಳಿಗೆ ಬಂದ ರೋಗಗಳೇನು?

ಆ) ಈ ಬಗ್ಗೆ ಇಲಾಖೆಯಿಂದ ಎಷ್ಟು ಔಷಧಿ ಪೂರೈಸಿದೆ?

ಇ) 1996-97ನೇ ಸಾಲಿನಲ್ಲಿ ಈ ವಿಷಯದಲ್ಲಿ ಸರ್ಕಾರದವರು ಹಮ್ಮಿಕೊಂಡಿರುವ ಯೋಜನೆಗಳಾವುವು?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):-

ಅ) ಸಿಸ್ಟೆಮಿಕ್ ಎಕ್ಟೊಡರ್ಮಲ್ ಮಿಸೊಡರ್ಮಲ್ ಬ್ಯಾಕುಲೊ ವೈರಸ್ (ಎಸ್.ಇ.ಎಂ.ಬಿ.ವಿ)ನಿಂದ ಬಿಳಿ ಚುಕ್ಕೆ ರೋಗ.

ಆ) ಈ ರೋಗಕ್ಕೆ ಔಷಧಿ ಇರುವುದಿಲ್ಲ.

ಇ) 1. ಮಂಗಳೂರಿನ ಮೀನುಗಾರಿಕೆ ಕಾಲೇಜಿನಲ್ಲಿ ಮೀನು ರೋಗ ನಿರ್ಣಯ ಪ್ರಯೋಗಾಲಯವನ್ನು ಸರ್ಕಾರದ ನೆರವಿನಿಂದ ಸ್ಥಾಪಿಸಿದ್ದು, ಈ ಪ್ರಯೋಗಾಲಯವು ಸೀಗಡಿ ರೋಗದ ಬಗ್ಗೆ ಹೆಚ್ಚಿನ ಸಂಶೋಧನೆಯನ್ನು ನಡೆಸುತ್ತಿದೆ.

2. ಸುದ್ದಿ ಮಾಧ್ಯಮಗಳ ಮೂಲಕ ಸೀಗಡಿ ರೋಗದ ಬಗ್ಗೆ ಜನಜಾಗೃತಿಯನ್ನು ಉಂಟು ಮಾಡಲಾಗುತ್ತಿದೆ.

3. ಸೀಗಡಿ ಬೆಳೆಗೆ ರಜೆಯನ್ನು ನೀಡುವಂತೆ ರೈತರಿಗೆ ಸಲಹೆ ಮಾಡಲಾಗಿದೆ.

4. ಹೊಸದಾಗಿ ಸೀಗಡಿ ಮರಿ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವಾಗ ಕರ್ನಾಟಕ ಪರಿಸರ ನಿಯಂತ್ರಣ ಮಂಡಳಿಯ ನಿರಾಪೇಕ್ಷಣಾ ಪತ್ರವನ್ನು ಪಡೆಯುವಂತೆ ನಿಗಧಿಪಡಿಸಲಾಗುತ್ತಿದೆ.

5. ರಾಜ್ಯ ಸರ್ಕಾರವು ಸೀಗಡಿ ರೋಗದ ಬಗ್ಗೆ ಮತ್ತು ಸೀಗಡಿ ಕೃಷಿಯಿಂದ ಉಂಟಾಗುವ ಪರಿಸರ ಮಾಲಿನ್ಯದ ಅಧ್ಯಯನಕ್ಕಾಗಿ ಪರಿಣಿತರ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಸೀಗಡಿ ಕೃಷಿಗೆ ರೋಗವು ತಗುಲಿರುವ ಸ್ಥಳಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸುತ್ತಿದೆ.

6. ಕರಾವಳಿ ತೀರ ಪ್ರದೇಶದ ಪರಿಸರದ ಬಗ್ಗೆ ಅಧ್ಯಯನ ನಡೆಸಿ ಕರಾವಳಿ ಪ್ರದೇಶದ ''ಮ್ಯಾನೇಜ್‌ಮೆಂಟ್ ಪ್ಲಾನ್'' ಅನ್ನು ಅರಣ್ಯ ಪರಿಸರ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ ಇಲಾಖೆಯು ರಚಿಸುತ್ತಿದೆ.

ವಿಷಯ:- ಹುಣಸೂರು ಕ್ಷೇತ್ರದಲ್ಲಿ ರಸ್ತೆ ಡಾಂಬರೀಕರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 633 (1133)

ಶ್ರೀ ವಿಜಯಶಂಕರ್ ಸಿ.ಹೆಚ್. (ಹುಣಸೂರು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?